ಗುಲ್ಬರ್ಗ ಜಿಲ್ಲೆಯಲ್ಲಿ ತೊಗರಿ ಕೃಷಿ ಬೆಳೆದ ರೈತರ ತೊಂದರೆ

891 - ಶ್ರೀ ರೇವುನಾಯಕ ಬೆಳಮಗಿ (ಕಮಲಾಪುರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯಲ್ಲಿನ ತೊಗರಿ ಕೃಷಿ ಬೆಳೆ ಬೆಳೆದ ರೈತರು ತೊಂದರೆಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದಲ್ಲಿ ರೈತನ ಬವಣೆ ತಪ್ಪಿಸಲು ಸರ್ಕಾರ ತೊಗರಿ ಬೆಳೆಯ ಬೆಲೆ ಬಗ್ಗೆ ಯೋಚಿಸಿದೆಯೇ?*

ಇ) *ಹಾಗಿದ್ದಲ್ಲಿ ಬೆಳೆಯ ಬೆಲೆಯನ್ನು ಯಾವಾಗಿನಿಂದ ಜಾರಿಗೆ ತರಲಿದೆ?*

ಈ) *ಬೆಳೆಯ ಬೆಲೆಯನ್ನು ಎಷ್ಟಕ್ಕೆ ನಿಗಧಿಪಡಿಸಲಾಗಿದೆ?*

ಶ್ರೀ. ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ಹೌದು

ಆ) ಹೌದು

ಇ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) -ಅದೇ-

ಗುಲ್ಬರ್ಗ ಜಿಲ್ಲೆಯಲ್ಲಿ ಮಂಜೂರಾದ ಗೋಮಾಳ ಮಂಜೂರಾತಿ

893 - ಶ್ರೀ ರೇವುನಾಯಕ (ಕಮಲಾಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯಲ್ಲಿ ಎಷ್ಟು ಜನರಿಗೆ ಗೋಮಾಳದ ಪಟ್ಟಾ ಕೊಟ್ಟಿದೆ?*

ಆ) *ಇನ್ನು ಎಷ್ಟು ಜನರಿಗೆ ಪಟ್ಟಾವನ್ನು ಕೊಡಲಿದೆ ಮತ್ತು ಯಾವಾಗ ಕೊಡಲಿದೆ? ತಾಲ್ಲೂಕುವಾರು ವಿವರ ನೀಡುವುದು?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) 6104 ಜನರಿಗೆ ಪಟ್ಟಾ ಕೊಡಲಾಗಿದೆ.

ಆ) ಇನ್ನು 6537 ಫಲಾನುಭವಿಗಳಿಗೆ ಪಟ್ಟಾ ಕೊಡಬೇಕಾಗಿದೆ. ತಾಲ್ಲೂಕುವಾರು ವಿವರ ಈ ಕೆಳಕಂಡತಿದೆ.